ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
HUBLI ELECTRICITY SUPPLY COMPANY LIMITED
(ಕರ್ನಾಟಕ ಸರ್ಕಾರದ ಸಂಪೂರ್ಣಸ್ವಾಮ್ಯಕ್ಕೆ ಒಳಪಟ್ಟಿದೆ)

ಸಹಾಯಕಕಾರ್ಯನಿರ್ವಾಹಕಇಂಜನೀಯರು(ವಿ)
ಕಾರ್ಯ& ಪಾಲನಾ ಉಪ ವಿಭಾಗ,
ಹು. ವಿ.ಸ.ಕಂ. ನಿ. ಕುಮಟಾರವರ ಕಛೇರಿ,
Phone No: 08386-222165, 224865

O/o,Assistant Executive Engineer (Ele),
O & M Sub Division
HESCOM, KUMTA.
Web-site : www.hescom.co.in
E-mail ID : aeekmt.hescom@gmail.com

Corporate Identity Number (CIN): U31401KA2002SGC030437

ಕ್ರಮಾಂಕ:ಕುಮಟಾ:ಸಕಾನಿಇ(ವಿ): 2020-21 915-18 ದಿನಾಂಕ:20/6/2020

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಹೆಸ್ಕಾಂ ಉಪವಿಭಾಗ ಕುಮಟಾ ಕಛೇರಿಯಲ್ಲಿ ಶ್ರೀ ನಾರಾಯಣ ಗಣಪತಿ ನಾಯ್ಕ ಊರಕೇರಿ ಕುಮಟಾ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 20.06.2020 ರಂದು ಗ್ರಾಹಕರ ಸಂವಾದ ಸಭೆಯನ್ನು ನಡೆಸಲಾಯಿತು, ಸದರಿ ಸಭೆಯಲ್ಲಿ ಹಾಜರಾದ ಗ್ರಾಹಕರು ,ಕಂಪನಿಯ ಅಧಿಕಾರಿಗಳು ಹಾಗೂ ನೌಕರರು ಈ ಕೆಳಗೆ ವಿವರಿಸಲಾಗುತ್ತಿರುವ ಗ್ರಾಹಕರ ಕುಂದು ಕೊರತೆಯ ಕುರಿತು ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಠರಾಯಿಸಿರುವ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

ಗ್ರಾಹಕರು

1. ಶ್ರೀ ನಾರಾಯಣ ಗಣಪತಿ ನಾಯ್ಕ, ಊರಕೇರಿ ಕುಮಟಾ
2. ಶ್ರೀ ಹನುಮಂತ ಗಣಪತಿ ಪಟಗಾರ, ಊರಕೇರಿ ಕುಮಟಾ
3. ಶ್ರೀ ಎಸ್ ಎ ಜಯವಂತ, ಗುಜರಗಲ್ಲಿ ಕುಮಟಾ
4. ಶ್ರೀ ರಾಮಚಂದ್ರ ಹೆಚ್ ಪಟಗಾರ, ಬಗ್ಗೋಣ ಕುಮಟಾ

ಉವಿಭಾಗೀಯ ಕಛೇರಿ ಅಧಿಕಾರಿ/ನೌಕರರು

5. ಶ್ರೀ ಎ.ಎಮ್.ಪಠಾಣ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಕಾ ಮತ್ತು ಪಾ ಉಪ ವಿಭಾಗ ಹೆಸ್ಕಾಂ ಕುಮಟಾ
6. ಶ್ರೀ ಸಂಜೀವ ಕೇ ಗೌಡ, ಸಹಾಯಕ ಇಂಜಿನೀಯರ್(ವಿ) ಉಪ ವಿಭಾಗ ಹೆಸ್ಕಾಂ ಕುಮಟಾ
7. ಶ್ರೀ. ವಿಜಯ ಎನ್ ತೋಡುರ ಸಹಾಯಕ ಇಂಜಿನೀಯರ್(ವಿ).ಶಾಖಾಧಿಕಾರಿ ಪಟ್ಟಣ ಶಾಖೆ
8. ಶ್ರೀ. ಲೋಹಿತ್ ಎಲ್ ನಾಯ್ಕ, ಸಹಾಯಕ ಲೆಕ್ಕಾಧಿಕಾರಿ, ಹೆಸ್ಕಾಂ ಕುಮಟಾ
9. ಶ್ರೀ ಟಿ ಎಮ್ ನಾಯ್ಕ ಹಿರಿಯ ಸಹಾಯಕ ಕಂದಾಯ ಶಾಖೆ
10. ಶ್ರೀ. ಹೆಚ್.ಎನ್.ಕುಲಕರ್ಣಿ, ಪ್ರಭಾರೆ ಶಾಖಾಧಿಕಾರಿ ಗ್ರಾಮೀಣ ಶಾಖೆ.2
11. ಶ್ರೀ ಸತೀಶ ಕೆ ಗೌಡ ಪ್ರಭಾರೆ ಶಾಖಾಧಿಕಾರಿ ಗ್ರಾಮೀಣ ಶಾಖೆ.1
12. ಶ್ರೀ. ಮಹೇಂದ್ರ ಎಮ್ ನಾಯ್ಕ ಕಿರಿಯ ಇಂಜಿನೀಯರ್ (ವಿ) (ಕಾಮಗಾರಿ ಘಟಕ)
13. ಶ್ರೀ. ಜಿ.ಎಲ್.ನಾಯ್ಕ, ಓವರಸೀಯರ್

ಚರ್ಚಿಸಿ ಠರಾಯಿಸಿರುವ ವಿಷಯಗಳು:

1. ಶ್ರೀ ಹನುಮಂತ ಗಣಪತಿ ಪಟಗಾರ, ಊರಕೇರಿ ಕುಮಟಾ ಇವರು ಸೌಭಾಗ್ಯ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕಂಬ ನೆಡುವ ಸಂದರ್ಭದಲ್ಲಿ ತಕರಾರು ವ್ಯಕ್ತಪಡಿಸಿರುವುದರಿಂದ ಬೇರೆಯವರ ಮಾಲ್ಕಿ ಜಾಗದಲ್ಲಿ ಕಂಬ ನೆಟ್ಟು ಸೌಭಾಗ್ಯ ಯೋಜನೆಯ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿತ್ತು. ನಂತರದ ದಿನಗಳಲ್ಲಿ ಶ್ರೀ ಹನುಮಂತ ಗಣಪತಿ ಪಟಗಾರ, ಊರಕೇರಿ ಕುಮಟಾ ಇವರು ತಮ್ಮ ಮನೆಯ ವಿದ್ಯುತ್ ಸ್ಥಾವರ ಸಂಖ್ಯೆ **VL552** ಕ್ಕೆ ಸೌಭಾಗ್ಯ ಯೋಜನೆಯ ಅಡಿಯಲ್ಲಿ ಮಂಜೂರಾಗಿರುವ ಕಂಬದಿಂದ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ಸಂದರ್ಭದಲ್ಲಿ ಊರ ನಾಗರಿಕರು ತಕರಾರು ವ್ಯಕ್ತಪಡಿಸಿದ್ದು, **VL552** ಕ್ಕೆ ವಿದ್ಯುತ್ ಸಂಪರ್ಕವನ್ನು ನೀಡಿರುವುದಿಲ್ಲಾ. ಈ ವಿಷಯದ ಕುರಿತು ಗ್ರಾಹಕರಾದ ಶ್ರೀ ಹನುಮಂತ ಗಣಪತಿ ಪಟಗಾರ ಇವರು ಸಭೆಯಲ್ಲಿ ಸ.ಕಾ.ನಿ.ಇಂ(ವಿ) ಇವರಲ್ಲಿ **VL552** ಕ್ಕೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ವಿನಂತಿಸಿದ್ದು, ಬಳಿಕ ಗ್ರಾಮೀಣ ಶಾಖೆ-1 ರ ಶಾಖಾಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಕ್ಯಾಂಪ್ ಪವರ್‌ಮೆನ್‌ರವರಿಗೆ ತ್ವರಿತವಾಗಿ ವಿದ್ಯುತ್ ಸಂಪರ್ಕವನ್ನು ನೀಡಲು ಸ.ಕಾ.ನಿ.ಇಂ(ವಿ) ರವರು ಸಭೆಯಲ್ಲಿ ನಿರ್ದೇಶಿಸಿದರು

( ಶಾಖಾಧಿಕಾರಿಗಳು ಗ್ರಾಮೀಣ-1 ಹಾಗೂ ಕ್ಯಾಂಪ್ ಪವರ್‌ಮೆನ್ ಸದರಿ ವಿಷಯದ ಕುರಿತು ಸೂಕ್ತ ಕ್ರಮ ಜರುಗಿಸುವುದು.)

2. ಶ್ರೀ ನಾರಾಯಣ ಗಣಪತಿ ನಾಯ್ಕ, ಊರಕೇರಿ ಕುಮಟಾ ಇವರು (ಗ್ರಾಹಕ ಸಂವಾದ ಸಭೆಯ ಅಧ್ಯಕ್ಷರು) ಪ್ರತೀ ತಿಂಗಳು ಗ್ರಾಹಕರಿಗೆ ನೀಡುವ ವಿದ್ಯುಚ್ಛಕ್ತಿ ಬಿಲ್ಲನಲ್ಲಿ ಆಯಾ ಕಾಲಂ ಗಳಿಗೆ ಹೊಂದಿಕೆಯಾಗುವಂತೆ ಮೊತ್ತವು ನಮೂದಿಸಲ್ಪಡದ ಕಾರಣಕ್ಕೆ ವಿಷಾದ ವ್ಯಕ್ತಪಡಿಸಿ ಅದನ್ನು ಮುಂದಿನ ದಿನಗಳಲ್ಲಿ ಸರಿಪಡಿಸುವಂತೆ ಸಭೆಯಲ್ಲಿ ವಿನಂತಿಸಿದ್ದು, ಸ.ಕಾ.ನಿ.ಇಂ(ವಿ) ರವರು ಕಂದಾಯ ಶಾಖೆಯ ಹಿ.ಸ/ಸ.ಲೆ.ಅಧಿಕಾರಿಗಳಿಗೆ ಸೂಕ್ತ ಕ್ರಮವಹಿಸುವಂತೆ ನಿರ್ದೇಶಿಸಿದರು.

(ಹಿ.ಸ/ಸ.ಲೆ.ಅಧಿಕಾರಿಗಳು ಕಂದಾಯ ಶಾಖೆ ಕುಮಟಾ ಈ ನಿಟ್ಟಿನಲ್ಲಿ ಫೀಡರ್ ಫ್ರಾಂಚೈಸಿ ಮಾಪಕ ಓದುಗರಿಗೆ ತಿಳುವಳಿಕೆ ನೀಡುವುದು.)

3. ಶ್ರೀ ಎಸ್ ಎ ಜಯವಂತ, ಗುಜರಗಲ್ಲಿ ಕುಮಟಾ ಇವರು ಎಪ್ರಿಲ್ 2020 ನೇ ತಿಂಗಳಲ್ಲಿ ತಮ್ಮ ಗೃಹಬಳಕೆಯ ಮಾಪಕ ಸಂಖ್ಯೆ **AEH28** ಕ್ಕೆ ಪಾವತಿಸಬೇಕಾಗಿರುವ ಮೊಬಲಗನ್ನು ಕಣ್ತಪ್ಪಿನಿಂದ **KIP397** ಕ್ಕೆ ಪಾವತಿಸಿದ್ದು ಅದನ್ನ ಸರಿಪಡಿಸುವಂತೆ ಸಭೆಯ ಗಮನಕ್ಕೆ ತಂದಿದ್ದು ಅದನ್ನು ಪರಿಶೀಲಿಸಿ ಸರಿಪಡಿಸುವಂತೆ ಸ.ಕಾ.ನಿ.ಇಂ(ವಿ) ರವರು ಹಿ.ಸ/ಸ.ಲೆ.ಅಧಿಕಾರಿಗಳಿಗೆ ಸೂಚಿಸಿದರು.
(ಹಿ.ಸ/ಸ.ಲೆ.ಅಧಿಕಾರಿಗಳು ಸಂಬಂಧಪಟ್ಟ ಗ್ರಾಹಕರಿಂದ ಲಿಖಿತವಾಗಿ ಪಡೆದು ನಿಯಮಾನುಸಾರ ಕ್ರಮ ಜರುಗಿಸುವುದು.)

4. ಶ್ರೀ ರಾಮಚಂದ್ರ ಹೆಚ್ ಪಟಗಾರ, ಬಗ್ಗೋಣ ಕುಮಟಾ ಇವರು ತಾತ್ಕಾಲಿಕ ಸ್ಥಾವರಗಳಿಗೆ ಪಾಲನೆ ಮಾಡಬೇಕಾಗಿರುವ ನಿಯಮಗಳ ಕುರಿತು ತಿಳಿಯಪಡಿಸುವಂತೆ ಸಭೆಯಲ್ಲಿ ವಿನಂತಿಸಿದ್ದು, ಸ.ಕಾ.ನಿ.ಇಂ(ವಿ)ರವರು ತಾತ್ಕಾಲಿಕ ಸ್ಥಾವರಗಳಿಗೆ ಅನುಪಾಲನೆ ಮಾಡಬೇಕಾಗಿರುವ ವಿಷಯಗಳ ಕುರಿತು ವಿವರಣೆ ನೀಡಿದರು.

ಅಂತಿಮವಾಗಿ ಗ್ರಾಹಕರಿಗೆ ವಂದನೆಗಳನ್ನು ಅರ್ಪಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರು(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ
ಹು.ವಿ.ಸ.ಕಂ.ನಿ.ಕುಮಟಾ

ಪ್ರತಿಯನ್ನು

1. ಅಧೀಕ್ಷಕ ಇಂಜಿನೀಯರ್(ವಿ)ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿ, ಹೆಸ್ಕಾಂ, ಅಯ್ಯಪ್ಪ ನಗರ, ಸಿರ್ಸಿ ರವರಿಗೆ ಮಾಹಿತಿಗಾಗಿ ಹಾಗೂ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನೀಯರ್ (ವಿ) ಕಾರ್ಯ ಮತ್ತು ಪಾಲನಾ ವಿಭಾಗ ಹೆಸ್ಕಾಂ,ಪ್ರಭಾತ ನಗರ,ಹೊನ್ನಾವರ ಇವರಿಗೆ ಮಾಹಿತಿಗಾಗಿ ಹಾಗೂ ಗೌರವಪೂರ್ವಕವಾಗಿ ಸಲ್ಲಿಸಿದೆ.
3. ಸಹಾಯಕ ಇಂಜಿನೀಯರ್(ತಾಂ)/.ಶಾಖಾಧಿಕಾರಿಗಳು ನಗರ ಶಾಖೆ/ ಗ್ರಾಮೀಣ 1/ ಗ್ರಾಮೀಣ 2 /ಮರಾಕಲ್ ಹಾಗೂ ಗೋಕರ್ಣ ಶಾಖೆ
4. ಸಲೆಅ/ಹಿಸ/ಕ.ಪತ್ರ